(91)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 330 ರ ಸೂಚನೆಗೆ ಉತ್ತರ ನೀಡುವ ಕುರಿತು.**

**ವಿಷಯ :**

**ಪಿಕಾರ್ಡ್ ಬ್ಯಾಂಕುಗಳ ವತಿಯಿಂದ ಸಾಲ ಪಡೆದ ರೈತರಿಗೆ ಸಾಲ ತೀರುವಳಿಗೆ ದಾಮ್‌ದುಪ್ಪಟ್ಟು ಯೋಜನೆಯಲ್ಲಿ ಸೌಲಭ್ಯ ಕಲ್ಪಿಸಿಕೊಟ್ಟು, ಸದರಿ ಯೋಜನೆಯ ಫಲಾನುಭವಿಗಳ ಸಂಬಂಧ ಮುಂದುವರೆದ ಬಾಕಿ ಬಡ್ಡಿಯನ್ನು ಸರ್ಕಾರ ಇದುವರೆವಿಗೂ ಪಾವತಿಸದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಬಗ್ಗೆ ಮಾಹಿತಿ ಪಡೆಯಲು ಸದನದಲ್ಲಿ ಪಸ್ತಾಪಿಸಬಯಸುತ್ತೇನೆ.**

**ಉತ್ತರ**

ರಾಜ್ಯ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ:ಸಿಎಂಡಬ್ಲ್ಯೂ/109/ಸಿಎಲ್‌ಎಸ್/2004, ಬೆಂಗಳೂರು, ದಿನಾಂಕ:04-03-2005 ರಡಿ ಪಿಕಾರ್ಡ್ ಬ್ಯಾಂಕುಗಳಿಂದ ರೈತರು ಪಡೆದ ಸಾಲ ಸಂಬಂಧ ದಾಮ್‌ದುಪ್ಪಟ್ಟು ಯೋಜನೆಯನ್ನು ಜಾರಿಗೆ ತಂದಿದ್ದು, ಅದರಂತೆ ರೈತರುಗಳು ಈ ಯೋಜನೆಯಡಿ ಅಸಲಿಗಿಂತ ಹೆಚ್ಚು ಬಡ್ಡಿಯನ್ನು ಮರುಪಾವತಿಸಿದಲ್ಲಿ ಬಾಕಿ ಅಸಲನ್ನು ಹಾಗೂ ಬಡ್ಡಿಯನ್ನು ಮನ್ನಾ ಮಾಡುವ ಯೋಜನೆಯಾಗಿರುತ್ತದೆ. ಅದರಂತೆ, ರೈತರು ಪಡೆದ ಅವಧಿ ಸಾಲದ ಅಸಲಿನ ಮೊತ್ತಕ್ಕಿಂತ ಹೆಚ್ಚು ಮೊತ್ತವನ್ನು ಬಡ್ಡಿ ರೂಪದಲ್ಲಿ ದಿನಾಂಕ:31-03-2004 ಕ್ಕೆ ಪಾವತಿಸಿದ್ದಲ್ಲಿ ಬಾಕಿ ಉಳಿದಿರುವ ಸಾಲವನ್ನು (ಅಸಲು ಮತ್ತು ಬಡ್ಡಿ ಒಳಗೊಂಡಂತೆ) ಮನ್ನಾ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಸರ್ಕಾರದ ಆದೇಶ ಸಂಖ್ಯೆ:ಸಿಎಂಡಬ್ಲ್ಯೂ/109/ಸಿಎಲ್‌ಎಸ್/2004, ಬೆಂಗಳೂರು, ದಿನಾಂಕ:04-03-2005 ರಡಿ ನೀಡಲಾಗಿದೆ. ಸದರಿ ಯೋಜನೆಯಡಿ ಕಾಸ್ಕಾರ್ಡ್ ಬ್ಯಾಂಕಿನ ಒಟ್ಟು 31,911 ಫಲಾನುಭವಿಗಳಿಗೆ ರೂ.60.21 ಕೋಟಿ ಮೊತ್ತದ ಕ್ಲೈಂ ಬಿಲ್ಲುಗಳನ್ನು ಸಲ್ಲಿಸಿದ್ದು, ಈವರೆಗೆ ಸರ್ಕಾರದಿಂದ ರೂ.45.39 ಕೋಟಿ ಬಿಡುಗಡೆಯಾಗಿರುತ್ತದೆ. ಉಳಿದಂತೆ ರೂ.14.82 ಕೋಟಿ ಕ್ಲೈಂ ಮೊತ್ತವು ಸರ್ಕಾರದಿಂದ ಕಾಸ್ಕಾರ್ಡ್ ಬ್ಯಾಂಕಿಗೆ ಬಿಡುಗಡೆಯಾಗಲು ಬಾಕಿ ಇತ್ತು.

ಆದರೆ, ಸರ್ಕಾರದ ದಿನಾಂಕ:27-04-2005 ರ ಬಡ್ಡಿ ಮನ್ನಾ ಆದೇಶವನ್ನು ಅನುಸರಿಸಿ ಗ್ರಾಮೀಣ ಗೃಹ ನಿರ್ಮಾಣ ಮತ್ತು ಕೃಷಿಯೇತರ ಯೋಜನೆಗಳಲ್ಲಿ ನೀಡಿದ ಸಾಲಗಳ ಕ್ಲೈಂ ಬಿಲ್ಲುಗಳನ್ನು ಮಹಾಲೇಖಪಾಲರು ಆಕ್ಷೇಪಿಸಿದ ಹಿನ್ನೆಲೆಯಲ್ಲಿ ಸರ್ಕಾರದಿಂದ ಪಿಕಾರ್ಡ್ ಬ್ಯಾಂಕುಗಳಿಗೆ ಬಿಡುಗಡೆಗೆ ಬಾಕಿ ಇದ್ದ ರೂ.8.82 ಕೋಟಿಗಳನ್ನು ತಡೆಹಿಡಿಯಲಾಗಿದೆ. ನಂತರ ಈ ಕುರಿತಂತೆ ದಿನಾಂಕ:17-10-2013 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಈ ಬಗ್ಗೆ ಚರ್ಚಿಸಿ ಸದರಿ ವಿಷಯವು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಪರಿಶೀಲನೆಗೆ ಒಳಪಟ್ಟು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಆಕ್ಷೇಪಿಸಿರುವ ಮೊತ್ತ ರೂ.8.82 ಕೋಟಿಗಳನ್ನು ಹೊರತುಪಡಿಸಿ ರೂ.6.00 ಕೋಟಿಗಳನ್ನು ಕೂಡಲೇ ಬಿಡುಗಡೆ ಮಾಡಲು ಅಗತ್ಯ ಕ್ರಮವನ್ನು ಸರ್ಕಾರದ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ನಿರ್ಣಯಿಸಿ ಆದೇಶಿಸಲಾಗಿದೆ. ಅದರಂತೆ ರೂ.6.00 ಕೋಟಿ ಪಾವತಿಸಲು ಬಾಕಿ ಉಳಿದಿದೆ.

ರೂ.6.00 ಕೋಟಿಗಳನ್ನು ಬಿಡುಗಡೆ ಮಾಡುವ ಕುರಿತು ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

**ಸಂಖ್ಯೆ: ಸಿಒ 162 ಸಿಎಲ್‌ಎಸ್ 2020**

ಎಸ್.ಟಿ.ಸೋಮಶೇಖರ್

**(ಎಸ್.ಟಿ ಸೋಮಶೇಖರ್)**

**ಸಹಕಾರ ಸಚಿವರು**